## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 320 (355) |
| ಸದಸ್ಯರ ಹೆಸರು: | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಕಂದಾಯ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 15-09-2021 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸಕೋಟೆ ತಾಲ್ಲೂಕಿನ ತಹಶೀಲ್ದಾರ್ ರವರು ತಮ್ಮ ಅಧಿಕಾರ ದುರುಪಯೋಗ ಪಡೆಸಿಕೊಂಡು ಸರ್ಕರಿ ಗೋಮಾಳ ಜಮೀನು ಹಾಗೂ ಹಿಡುವಳ ಜಮೀನುಗಳನ್ನು ನಿಯಮಬಾಹಿರವಾಗಿ ಖಾತೆ ವರ್ಗಾಯಿಸುತ್ತಿರುವ ಕುರಿತು ದೂರು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. ಹೊಸಕೋಟೆ ತಾಲ್ಲೂಕು ತಹಶೀಲ್ದಾರ್ ರವರ ವಿರುದ್ಧ, ಬಿಜ್ಜವಾರ ನಾಗರಾಜ್, ಸಂಸ್ಥಾಪಕರು, ರಾಜ್ಯಾಧ್ಯಕ್ಷರು, ಪ್ರಜಾ ವಿಮೋಚನಾ ಬಹುಜನ ಸಮಿತಿ (ರಿ), ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ದಿನಾಂಕ:15-10-2020 ರಂದು ದೂರು ಸಲ್ಲಿಸಿರುತ್ತಾರೆ. |
| ಆ) | ಹೌದಾದಲ್ಲಿ, ಯಾವ ಯಾವ ಗೋಮಾಳ ಜಮೀನು ಹಾಗೂ ಹಿಡುವಳ ಜಮೀನುಗಳನ್ನು ನಿಯಮಬಾಹಿರವಾಗಿ ಖಾತೆ ವರ್ಗಾಯಿಸಿರುವ ಬಗ್ಗೆ ದೂರು ದಾಖಲಾಗಿವೆ: (ಪ್ರಕರಣವಾರು ಮಾಹಿತಿ ಒದಗಿಸುವುದು) | ಸದರಿ ದೂರು ಅರ್ಜಿಯಲ್ಲಿ ಈ ಕೆಳಕಂಡ ಜಮೀನುಗಳಿಗೆ ನಿಯಮಬಾಹಿರವಾಗಿ ಖಾತೆ ವರ್ಗಾಯಿಸಿರುವುದಾಗಿ ತಿಳಿಸಿರುತ್ತಾರೆ.<br>1. ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಅಮಾನಿದೊಡ್ಡಕೆರೆ ಸ.ನಂ. 83/1ರ 0-20ಗುಂಟೆ ಜಮೀನಿಗೆ.<br>2. ಹೊಸಕೋಟೆ ತಾಲ್ಲೂಕು, ತಹಶೀಲ್ದಾರ್ ನ್ಯಾಯಾಲಯದ ಸಂಖ್ಯೆ:ಆರ್‌ಆರ್‌ಟಿ (ಡಿಸ್) ಭೂಮಿ/593/2020-21, ದಿನಾಂಕ:13-05-2020ರ ಆದೇಶದ ಬಗ್ಗೆ.<br>3. ಹೊಸಕೋಟೆ ತಾಲ್ಲೂಕು, ತಹಶೀಲ್ದಾರ್ ನ್ಯಾಯಾಲಯದ ಸಂಖ್ಯೆ:ಆರ್‌ಆರ್‌ಟಿ (ಡಿಸ್) ಭೂಮಿ/544/2019-20, ದಿನಾಂಕ:02-06-2020ರ ಆದೇಶದ ಬಗ್ಗೆ.<br>4. ಹೊಸಕೋಟೆ ತಾಲ್ಲೂಕು, ಅನಗೊಂಡನಹಳ್ಳಿ ಹೋಬಳಿ, ಮುತ್ತಸಂದ್ರ ಗ್ರಾಮದ ಸ.ನಂ. 86 ರಲ್ಲಿ 2-07 ಎ/ಗು<br>5. ಹೊಸಕೋಟೆ ತಾಲ್ಲೂಕು, ಅನಗೊಂಡನಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದ ಸ.ನಂ. 118 ರಲ್ಲಿ 2-00 ಎಕರೆ.<br>6. ಹೊಸಕೋಟೆ ತಾಲ್ಲೂಕು, ಅನುಗೊಂಡಹಳ್ಳಿ ಹೋಬಳಿ, ಗಣಗನೂರು ಗ್ರಾಮದ ಸ.ನಂ. 57ರ ಜಮೀನಿನ ಖಾತೆ ಬಗ್ಗೆ. |

| | | |
|---|---|---|
| ಇ) | ಸದರಿ ತಹಶೀಲ್ದಾರ್‌ರವರು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ಸರ್ಕಾರಿ ಗೋಮಾಳ ಜಮೀನು ಹಾಗೂ ಹಿಡುವಳಿ ಜಮೀನುಗಳನ್ನು ನಿಯಮಬಾಹಿರವಾಗಿ ಖಾತೆ ವರ್ಗಾಯಿಸುತ್ತಿರುವ ಕುರಿತು ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ದಿನಾಂಕ:27-10-2020ರಂದು ತಮ್ಮ ಪತ್ರದ ಮೂಲಕ ಸರ್ಕಾರಕ್ಕೆ ವರದಿ ಮಾಡಿದ್ದರೂ, ಈವರೆವಿಗೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು; | ಸಂಸ್ಥಾಪಕರು, ರಾಜ್ಯಾಧ್ಯಕ್ಷರು, ಪ್ರಜಾ ವಿಮೋಚನಾ ಬಹುಜನ ಸಮಿತಿ (ರಿ) ರವರು ದಿನಾಂಕ:15-10-2020ರಂದು ನೀಡಿರುವ ದೂರು ಅರ್ಜಿಗೆ ಸಂಬಂಧಿಸಿದಂತೆ ನಿಯಮಾನುಸಾರ ಪರಿಶೀಲಿಸಿ, ಸ್ಪಷ್ಟವಾದ ವರದಿಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ದಿನಾಂಕ:08-02-2021ರಂದು ಪತ್ರ ಬರೆಯಲಾಗಿದ್ದು, ಜಿಲ್ಲಾಧಿಕಾರಿಗಳಿಂದ ವರದಿ ಸ್ವೀಕೃತಗೊಂಡ ಕೂಡಲೇ ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು. |
| ಈ) | ಸದರಿ ಅಧಿಕಾರಿಯು ತಮ್ಮ ಅಧೀನದಲ್ಲಿರುವ ಅಧಿಕಾರಿ / ನೌಕರರುಗಳಿಗೆ ಮಾನಸಿಕ ಕಿರುಕುಳ ನೀಡುತ್ತಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಶ್ರೀ ರಾಜೇಂದ್ರ ಪ್ರಸಾದ್, ರಾಜಸ್ವ ನಿರೀಕ್ಷಕರು, ಅನುಗೊಂಡಹಳ್ಳಿ ಹೋಬಳಿ ಇವರು ಹೊಸಕೋಟೆ ತಾಲ್ಲೂಕು, ತಹಶೀಲ್ದಾರ್ ರವರು ಕಿರುಕುಳ ನೀಡಿರುವುದಾಗಿ ಸರ್ಕಾರಕ್ಕೆ ದೂರನ್ನು ಸಲ್ಲಿಸಿದ್ದು, ಸದರಿ ದೂರನ್ನು ನಿಯಮಾನುಸಾರ ಪರಿಶೀಲಿಸಿ, ಸರ್ಕಾರಕ್ಕೆ ವರದಿಯನ್ನು ನೀಡುವಂತೆ, ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಪತ್ರ ಬರೆಯಲು ಕ್ರಮವಹಿಸಲಾಗುತ್ತಿದೆ. ಇದನ್ನು ಹೊರತು ಪಡಿಸಿ ಯಾವುದೇ ದೂರುಗಳು ಸರ್ಕಾರದಲ್ಲಿ ಸ್ವೀಕೃತಗೊಂಡಿರುವುದಿಲ್ಲ. |
| ಉ) | ಸದರಿ ಅಧಿಕಾರಿಯ ವಿರುದ್ಧ ಅನೇಕ ದೂರುಗಳು ಬಂದಿದ್ದರೂ ಸಹ ಆ ಅಧಿಕಾರಿಯವರನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ವರ್ಗಾವಣೆಗೊಳಿಸದೆ, ಶಿಸ್ತು ಕ್ರಮ ಕೈಗೊಳ್ಳದಿರಲು ಕಾರಣವೇ; ಯಾವ ಕಾಲಮಿತಿಯೊಳಗೆ ಸದರಿ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಾಗುವುದು? | ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿ ಸ್ವೀಕೃತಗೊಂಡ ಕೂಡಲೇ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲು ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: ಕಂಇ 303 ಎಎಸ್‌ಡಿ 2021**

**(ಆರ್. ಅಶೋಕ)**
**ಕಂದಾಯ ಸಚಿವರು.**